# ವಿಚಾರ ಸಾಹಿತ್ಯ: ಮತ, ಧರ್ಮದ ಪರಿಧಿಯಲ್ಲಿ ಸ್ತ್ರೀ

ಸುಮಾ ವ ಸಾವಂತ

ಸಹಾಯಕ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಧಾರವಾಡ.

DOI: https://doi.org/10.5281/zenodo.18788136

## ABSTRACT:

ಕನ್ನಡ ಸಾಹಿತ್ಯ ಪರಂಪರೆಯು ಆದಿಕಾಲದಿಂದಲೂ ವೈಚಾರಿಕತೆಯನ್ನು ತನ್ನೊಳಗೆ ಮಿಳಿತಗೊಳಿಸಿಕೊಂಡೇ ಬಂದಿದೆ. ವಿಚಾರ ಸಾಹಿತ್ಯ ಒಂದು ಪ್ರಕಾರವಾಗಿ ಪ್ರತ್ಯೇಕತೆಯನ್ನು ಪಡೆದುಕೊಂಡಿರುವುದು ಸುಮಾರು 20ನೆಯ ಶತಮಾನದಲ್ಲಿ. ಅಲ್ಲಿಯವರೆಗೂ ಸೃಜನಶೀಲ ಸಾಹಿತ್ಯದ ಮೂಲಕವೇ ವೈಚಾರಿಕ ಸಾಹಿತ್ಯವನ್ನು ಕಾಣಬಹುದು. ವಿಚಾರ ಸಾಹಿತ್ಯವು ಸಮಾಜದಲ್ಲಿ ನಡೆದ ಮತ್ತು ನಡೆಯುತ್ತಿರುವಂತಹ ವಿಷಯಗಳನ್ನೊಳಗೊಂಡು ಅದಕ್ಕೆ ಪ್ರತಿಕ್ರಿಯೆಯನ್ನು ನೀಡುತ್ತಲೇ ಸಾಗಿದೆ.

ಎಪ್ಪತ್ತರ ದಶಕದ ಕಾಲಘಟ್ಟದ ಸಂದರ್ಭದಲ್ಲಿ ನಡೆದ ಹಲವಾರು ಹೋರಾಟಗಳು, ಚಳುವಳಿಯ ಮೂಲಕ ಅನೇಕ ಚಿಂತಕರು ಸಮಾಜದಲ್ಲಿನ ಅಸಮಾನತೆ, ಶೋಷಣೆಗಳ ವಿರುದ್ಧ ಪ್ರತಿಭಟಿಸಿರುವುದನ್ನು ಕಾಣುತ್ತೇವೆ. ಅದೇ ಕಾಲಕ್ಕೆ ಮಹಿಳಾ ಚಳುವಳಿಯು ತನ್ನ ಅಸ್ತಿತ್ವವನ್ನು ಆರಂಭ ಮಾಡಿದ್ದನ್ನೂ ಸಹ ಕಾಣಬಹುದು. ಸ್ತ್ರೀವಾದಿ ಚಿಂತಕಿಯರು ಎಪ್ಪತ್ತರ ದಶಕದಲ್ಲಿ ಮಹಿಳಾ ವಿಮೋಚನೆಗಾಗಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡರು. ಸ್ತ್ರೀವಾದಿ ಸಾಹಿತ್ಯವು ಪುರುಷ ಪ್ರಧಾನ ಸಮಾಜವು ಮಹಿಳೆಯರ ಮೇಲೆ ನಡೆಸುತ್ತಿದ್ದ ಶೋಷಣೆ, ಲೈಂಗಿಕ ದೌರ್ಜನ್ಯ, ಲಿಂಗ ತಾರತಮ್ಯ ಇವುಗಳನ್ನು ಪ್ರತಿಭಟಿಸುವ ಸಲುವಾಗಿಯೇ ರಚನೆಯಾದವು. ಇದೇ ಸಂದರ್ಭದಲ್ಲಿ ಸೃಜನಶೀಲ ಸಾಹಿತ್ಯವಾದ ಕಥೆ, ಕಾದಂಬರಿ, ನಾಟಕ ಇವುಗಳ ಮೂಲಕ ಯಜಮಾನ್ಯ ಸಂಸ್ಕೃತಿಯ ವಿರುದ್ಧ ಪ್ರತಿರೋಧವನ್ನು ಅಭಿವ್ಯಕ್ತಿಸಿರುವುದು ಕಾಣಬಹುದು. ಬಹುಮುಖ್ಯವಾಗಿ ಮಹಿಳೆಯರ ಸಮಸ್ಯೆಗಳನ್ನು ಮತ್ತು ಅವುಗಳನ್ನು ಮಹಿಳೆ ಹೇಗೆ ಧಿಕ್ಕರಿಸಿ ಪುರುಷ ಪ್ರಧಾನ ಸಮಾಜದ ಸಾರ್ವತ್ರಿಕ ಕಟ್ಟಳೆಗಳಾದ ದೇವರು, ಧರ್ಮ, ಸಂಪ್ರದಾಯ ಆಚರಣೆಗಳನ್ನು ಮುರಿಯುವ ಪ್ರಯತ್ನವನ್ನು ಅಲ್ಲಿಯ ಮುಖ್ಯ ಪಾತ್ರಗಳ ಮೂಲಕ ಚಿತ್ರಿಸಲಾಗಿದೆ. ಮಾತೃಪ್ರಧಾನ ಕುಟುಂಬ ವ್ಯವಸ್ಥೆಯಿಂದ ಪುರುಷ ಪ್ರಧಾನ ಕುಟುಂಬ ವ್ಯವಸ್ಥೆಗೆ ಬದಲಾದಾಗಿನಿಂದ ಮಹಿಳೆಯನ್ನು ಭೋಗದ ವಸ್ತು, ಪುರುಷನ ಸೇವೆಗೆ ಮಾತ್ರ ಸೀಮಿತವಾದವಳು ಎನ್ನುವಂತಹ ಅಧೀನ ನೆಲೆಯಲ್ಲಿಯೇ ಮಹಿಳೆಯನ್ನು ನೋಡಲಾಗಿದೆ. ಮನುಧರ್ಮಶಾಸ್ತ್ರವು ಹೇಳಿರುವಂತೆ ಸ್ತ್ರೀ ಸ್ವಾತಂತ್ರ್ಯಕ್ಕೆ ಅರ್ಹಳಲ್ಲ ಎಂಬುದನ್ನು ಚಾಚೂ ತಪ್ಪದೆ ಈ ಸಮಾಜವು ಪಾಲಿಸಿಕೊಂಡೇ ಬಂದಿದೆ. ಹೀಗಾಗಿ ಹಿಂದಿನಿಂದಲೂ ಮಹಿಳೆಯನ್ನು ಶಿಕ್ಷಣದಿಂದ ವಂಚಿತಳನ್ನಾಗಿ ಮಾಡಲಾಯಿತು. ಎಲ್ಲದರ ವಿರುದ್ಧ ಮಹಿಳಾ ವಿಚಾರ ಸಾಹಿತ್ಯವು ಪ್ರತಿಭಟಿಸುತ್ತಾ ಪರ್ಯಾಯ ಮಾರ್ಗವನ್ನು ಹುಡುಕಿಕೊಳ್ಳುವ ಮತ್ತು ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಪ್ರೇರಣೆ ನೀಡಿದೆ.

ಸಮಕಾಲೀನ ಸಂದರ್ಭದಲ್ಲಿ ಕೋಮುವಾದ ಮತ್ತು ಮೂಲಭೂತವಾದವು ಉತ್ತುಂಗದ ಸ್ಥಿತಿಯನ್ನು ತಲುಪುತ್ತಿದೆ. ಇದರ ಭಾಗವಾಗಿ

ಮಂದಿರ, ಮಸೀದಿ, ಚರ್ಚುಗಳ ಮೇಲೆ ಧ್ವಂಸ ಕೃತ್ಯಗಳನ್ನು ನಡೆಸುವ ಮಾದರಿಗಳು ನಮ್ಮ ಮುಂದಿವೆ. ಧರ್ಮ ಮತ್ತು ಧಾರ್ಮಿಕತೆಯ ನೆಪವೊಡ್ಡಿ ದಲಿತರು, ಮಹಿಳೆಯರು ಮತ್ತು ದಮನಿತರ ಬದುಕಿನ ಮೇಲೆ ಆಕ್ರಮಣಗಳು ನಡೆಯುತ್ತಿವೆ. ಈ ಎಲ್ಲಾ ಕುತಂತ್ರಗಳ ಹಿಂದೆ ವೈದಿಕಶಾಹಿಯ ಪ್ರಭಾವವಿರುವುದು ಸ್ಪಷ್ಟವಾಗುತ್ತದೆ.

**KEYWORDS:**

ಸಂಪ್ರದಾಯ, ಆಚರಣೆ, ನಂಬಿಕೆ, ಲೈಂಗಿಕ ದೌರ್ಜನ್ಯ, ಲಿಂಗತಾರತಮ್ಯ, ಸ್ತ್ರೀವಾದ.

ಭಾರತವು ವೈವಿಧ್ಯಮಯವಾದ ಸಂಸ್ಕೃತಿಯನ್ನು ಹೊಂದಿರುವ ದೇಶವಾಗಿದೆ. ಹಲವಾರು ಜಾತಿ, ಧರ್ಮಗಳಲ್ಲಿ ತಮ್ಮದೇ ಆದ ಸಂಪ್ರದಾಯ, ಆಚರಣೆ, ನಂಬಿಕೆಗಳನ್ನು ಬೆಳೆಸಿಕೊಂಡು ಬರಲಾಗಿದೆ. ಎಲ್ಲಾ ಜಾತಿ, ಧರ್ಮಗಳಲ್ಲಿಯೂ ಮಹಿಳೆಯನ್ನು ಎರಡನೇ ದರ್ಜೆಯವಳನ್ನಾಗಿಯೇ ನಡೆಸಿಕೊಂಡು ಬರಲಾಗಿದೆ. ಮತ, ಧರ್ಮದ ಹೆಸರಿನಲ್ಲಿ ಮಹಿಳೆಯರನ್ನು ಶೋಷಣೆ ಮಾಡುತ್ತಲೇ ಇದೆ. ಈ ಎಲ್ಲಾ ವಿಷಯವಾಗಿ ವಿಚಾರ ಸಾಹಿತ್ಯದಲ್ಲಿ ಹಲವಾರು ಲೇಖಕಿಯರು ತಮ್ಮದೇ ಆದ ನಿಲುವನ್ನು ವ್ಯಕ್ತಪಡಿಸಿರುವುದನ್ನು ನಾವಿಲ್ಲಿ ಗಮನಿಸಬಹುದು. ಅಲ್ಲದೆ ದಲಿತರು ಮತ್ತು ಮಹಿಳೆಯನ್ನು ಧರ್ಮ ಮತ್ತು ದೇವರ ಹೆಸರಿನಲ್ಲಿ ಹೀನಾಯವಾಗಿ ಈ ಸಮಾಜ ಹೇಗೆ ನಡೆಸಿಕೊಂಡು ಬಂದಿದೆ? ಮತ್ತು ಅದರಿಂದಾಗಿ ಅವರು ಅನುಭವಿಸಿದಂತಹ ಹಾಗೂ ಎದುರಿಸಿದ ಸಂಕಷ್ಟಗಳು, ಎಂತಹ ಕ್ರೂರ ವ್ಯವಸ್ಥೆಯನ್ನು ಹೊಂದಿತ್ತು ಎನ್ನುವುದನ್ನು ಲೇಖಕಿಯರ ವಿಚಾರಗಳಲ್ಲಿ ಕಾಣಬಹುದಾಗಿದೆ.

ಕೆ.ನೀಲಾ ಅವರು 'ಹಾಲ್ದಿಂಗಳ ಕೆಳಗೆ ಸ್ನೇಹದ ಸೇತು' ಎಂಬ ಲೇಖನದಲ್ಲಿ ಧರ್ಮದ ನೆಲೆಯೊಳಗೆ ಮಹಿಳೆಯನ್ನು ಹೇಗೆ ತರತಮ ಭಾವವನ್ನು ಮೂಡಿಸುತ್ತದೆ ಎನ್ನುವುದಕ್ಕೆ ಈ ಮುಂದಿನಂತೆ ವಿವರಿಸಿದ್ದಾರೆ. ಅವರ ಮಾತಿನಲ್ಲೇ ಹೇಳುವುದಾದರೆ: ''ಎಂಟು ವರ್ಷದ ಬಾಲಕ, ಬೋಡು ತಲೆಯ ಹಿಂಭಾಗಕ್ಕೆ ನೇತಾಡುವ ಪುಟ್ಟ ಜುಟ್ಟು ಅಂಗಿಯಿಲ್ಲದ ಎದೆಯ ಮೇಲೆ ಅಡ್ಡಲಾಗಿ ಜನಿವಾರ, ಮಾಸಿದ ನೂಲಿನ ಧೋತರ, ಏನು ಕೇಳಿದರೂ ಪಟಪಟನೇ ಮಾತಿನ ದಾಳ ಉರುಳಿಸುವ ಪರಿಗೆ ಬೆರಗಾಗಲೇಬೇಕು. ವೇದಾಧ್ಯಯನಕ್ಕೆಂದು ನೂರು ಬ್ರಾಹ್ಮಣ ವಟುಗಳು ಸುಮಾರು ನಾಲ್ಕು ರಾಜ್ಯಗಳಿಂದ ಬಂದವರು. 'ನೀವು ಅಧ್ಯಯನ ಮಾಡುವ ಪುಸ್ತಕ ಕೊಡಿ' ಅಂದರೆ ಥಟ್ಟಂತ 'ಇಲ್ಲ... ಇಲ್ಲ... ನೀವು ಹೆಂಗಸರು ಅದನ್ನು ಮುಟ್ಟಿದರೆ ಪಾಪ ತಗುಲುತ್ತದೆ' ಎಂದು ಬಲು ಮುಗ್ಧತೆಯಿಂದ ಉತ್ತರಿಸಿದ್ದಕ್ಕೆ ಹುಡುಗ ತಕ್ಷಣಕ್ಕೆ ನಕ್ಕರೂ ತುಂಬ ಚಾಲಾಕಿಯಂತೆ ವರ್ತಿಸಿದ. ಖಾನಾಪುರ, ನಾನು ಮತ್ತು ಗೆಳೆಯರೆಲ್ಲ ಬೇಕೆಂದೇ ಅನೇಕ ವಿಷಯ ಕೆದಕಿ ತೆಗೆದರೆ ಗಾಬರಿಯಾಗುವಂತಹ ಸಂಗತಿಗಳು ಈಚೆ ಬಂದವು. ಸರ್ವಧರ್ಮಗಳ ಸಮನ್ವಯ ಆಚರಣೆಯ ಕೇಂದ್ರವಾಗಿರುವ ಮಾಣಿಕ ಪ್ರಭುವಿನ ಮಠವು ಸಂಪೂರ್ಣ

‘ಸನಾತನಿ’ಗಳ ಅಡ್ಡೆಯಾಗಿರುವುದು ಮತ್ತು ಈಚೆಗೆ 6 ವರ್ಷಗಳಿಂದ ಬ್ರಾಹ್ಮಣ ವಟುಗಳಿಗಾಗಿ ವೇದ ಪಾಠಶಾಲೆ ಶುರುವಾಗಿರುವುದು, ಮಕ್ಕಳಿಗೆ ಪಾಠ ಮಾಡಲು ಶೃಂಗೇರಿಯಿಂದ ಶಿಕ್ಷಕನೊಬ್ಬ ಇಲ್ಲಿಯೇ ಠಿಕಾಣಿ ಹೂಡಿರುವುದು ಎಲ್ಲವೂ ಬಯಲಾದವು. ಹಿಂದೂ ಮಂದಿರಗಳ ಪೂಜಾರಿಕೆ, ಹಿಂದೂ ಧರ್ಮ ಪ್ರಚಾರದ ಪ್ರಮುಖ ಉದ್ದೇಶ ಹೊಂದಿರುವ ವೈದಿಕ ಪಾಠಶಾಲೆಗಳು ಸನಾತನ ವ್ಯವಸ್ಥೆಯನ್ನು ಗಟ್ಟಿಗೊಳಿಸಲೆಂದೇ ಇರುವ ತಾಣಗಳು.” ಸನಾತನ ಧರ್ಮಿಗಳು ಹಿಂದುತ್ವದ ಹೆಸರಿನಲ್ಲಿ ಧಾರ್ಮಿಕ ಅಂಧತ್ವವನ್ನು ಹೆಚ್ಚು ಮಾಡಿಕೊಂಡೇ ಬರುತ್ತಿರುವುದು ಇಲ್ಲಿ ತಿಳಿಯುತ್ತದೆ.

ಪೂಜಾರಿಕೆಯ ಹೆಸರಿನಲ್ಲಿ ಬ್ರಾಹ್ಮಣ ವಟುಗಳು ವೇದಾಧ್ಯಯನಕ್ಕೆಂದೇ ಬೇರೆ ಬೇರೆ ರಾಜ್ಯಗಳಿಂದ ಒಂದೆಡೆ ಸೇರಿ ವೈದಿಕ ಶಿಕ್ಷಣವನ್ನು ಮಕ್ಕಳಿಗೆ ಕಲಿಸುವ ಮೂಲಕವಾಗಿ ಚಿಕ್ಕ ವಯಸ್ಸಿನಲ್ಲೇ, ದ್ವೇಷ, ವೈರತ್ವವನ್ನು ಹೆಚ್ಚಿಸುವ ಕೆಲಸವನ್ನು ಮಾಡುತ್ತಿರುವುದನ್ನು ಕಾಣಬಹುದಾಗಿದೆ. ಮುಟ್ಟು ಮೈಲಿಗೆಯಂತಹ ಕ್ರೂರ ಆಚರಣೆಯನ್ನೂ ಎಳೆ ಮನಸ್ಸುಗಳಿಗೆ ಅಚ್ಚೊತ್ತುವಂತೆ ಧಾರ್ಮಿಕ ಶಿಕ್ಷಣವನ್ನು ಗಟ್ಟಿಗೊಳಿಸಲಾಗುತ್ತಿದೆ. ಮಠ ಮಂದಿರಗಳು ಸನಾತನ ಧರ್ಮಿಗಳಿಗೆ ಹಿಂದೂ ಧರ್ಮವನ್ನು ಪ್ರಚಾರ ಮಾಡುವ ಪ್ರಮುಖ ಅಡ್ಡೆಯಾಗುತ್ತವೆ ಎನ್ನುವುದನ್ನು ಇಲ್ಲಿ ಅಭಿವ್ಯಕ್ತಿಸಿದ್ದಾರೆ.

ಮಠ ಮಂದಿರಗಳು ಹೆಣ್ಣಿನ ಶೋಷಣೆಯ ಕೇಂದ್ರಗಳಾಗಿವೆ. ಮಠಾಧಿಪತಿ ಏನು ಮಾಡಿದರೂ ಅದು ಸರಿಯಾಗೇ ಇರುತ್ತದೆ ಮತ್ತು ಆತ ದೈವಾಂಶ ಸಂಭೂತನಾಗಿರುತ್ತಾನೆ ಎಂಬ ಅಂಧಕಾರದಲ್ಲಿಯೇ ಜನ ಸಮುದಾಯ ಬದುಕುತ್ತಿರುವುದು ಬಹು ಹಿಂದಿನಿಂದಲೂ ಬೆಳೆದುಬಂದಿದೆ. “ಕಳೆದೆರಡು ತಿಂಗಳಲ್ಲಿ ಸುದ್ದಿಯಾಗಿ, ಬಹುಶಃ ನೆನಪಿನಿಂದ ಮಾಸಿ ಹೋಗಲು ಹವಣಿಸುತ್ತಿರುವ ಧಾರ್ಮಿಕ ಮುಖವಾಡ ಹೊತ್ತ ಎರಡು ಬರ್ಬರ ಕೃತ್ಯಗಳು ಆತಂಕಕಾರಿ ಸನ್ನಿವೇಶವನ್ನು ಸೃಷ್ಟಿಸಿವೆ. ಕಾಷಾಯ ವಸ್ತ್ರದ ಮುಸುಕಿನಲ್ಲಿ ಕಾಮಕೇಳಿಗೆ ಆಹ್ವಾನಿಸಿ, ಬಲಿಯಾದ ಪಾರ್ವತಮ್ಮನನ್ನು ಮತ್ತು ಅವಳ ಗೆಳತಿ ಹಸನ್‌ಬಿಯನ್ನು ಸಾರ್ವಜನಿಕವಾಗಿ ನಗ್ನಗೊಳಿಸಿದ ಕೊಪ್ಪಳದ ಮಹಾಂತನನ್ನು ಇನ್ನೂ ಲಾಕಪಿಗೆ ಹಾಕದಿರುವುದಕ್ಕೆ ಕಾರಣವೇನು? ಈ ನಗ್ನ ದೌರ್ಜನ್ಯದ ವಿರುದ್ಧ ಎದ್ದ ಪ್ರತಿಭಟನೆಯ ದನಿಗಳ ಪರಿಣಾಮವನ್ನೂ ಕುಗ್ಗಿಸುವಂತೆ ಇರುವ ಕಾರ್ಯಗಳೆಷ್ಟು? ರಾಕ್ಷಸೀ ಪ್ರವೃತ್ತಿಯ ಮಹಾಂತನ ಕೃತ್ಯ ಒಬ್ಬ ವ್ಯಕ್ತಿಯ ಹುಚ್ಚಾಟವಾಗಿರದೆ ಒಂದು ಸಂಸ್ಥೆಯಾಗಿ ಗೂಂಡಾ ಜನಗಳ ಪುಂಡ ಪೋಕರಿಗಳ ಆಲದ ಮರವಾಗಿದೆಯೆಂಬುದನ್ನು ಮರೆಯಬಾರದು. ಈ ಮರದ ಬೇರು, ಬಿಳಿಲುಗಳು ಎಷ್ಟು ಬಲಿಷ್ಠವಾದುದು ಎಂಬುದನ್ನು ಕಳೆದೆರಡು ತಿಂಗಳಿಂದ ನಡೆದ ಮಠ ಪ್ರವೇಶ ಮಾಡಿಸಿಕೊಂಡ ನಮ್ಮ ಮೂಢ ಜನರ ಪ್ರಜ್ಞೆ ಗಾಬರಿ ಹುಟ್ಟಿಸುವಂತಹದು.”

ಇಲ್ಲಿ ಮಹಿಳೆಯು ಯಾವ ತಪ್ಪೂ ಮಾಡದೇ ಇದ್ದರೂ ಸಮಾಜದ ಎದುರಲ್ಲಿ

ತಪ್ಪಿತಸ್ಥಳಾಗಿಯೇ ಕಂಡಿರುವುದು ದುರಂತವೇ ಸರಿ. ಒಬ್ಬ ಕಾಮುಕನಿಂದ ದೌರ್ಜನ್ಯಕ್ಕೆ ಒಳಗಾಗಿದ್ದರೂ ಕೂಡ ಮೂಢ ಜನರ ಕಣ್ಣಲ್ಲಿ ತಪ್ಪಿತಸ್ಥಳಾಗಿ ಕಂಡಿದ್ದೂ ಅಲ್ಲದೆಯೆ ನಗ್ನಳಾಗಿ ಮೆರವಣಿಗೆ ಮಾಡಿಸಿಕೊಳ್ಳುವ ಸಂದರ್ಭ ಅದೆಂತಹ ಕ್ರೂರವಾಗಿದ್ದೀತು. ತಪ್ಪು ಮಾಡಿದ ಮಠಾಧಿಪತಿ ಮಹಾಂತನನ್ನು ಯಾವುದೇ ರೀತಿಯಾದಂತಹ ಆರೋಪವನ್ನೂ ಮಾಡದೇ, ಆತನ ವಿರುದ್ಧ ಯಾವ ಶಿಕ್ಷೆಯನ್ನೂ ವಿಧಿಸದೇ ಇರುವುದು ಪುರುಷ ಪ್ರಧಾನ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ. ಈ ಪ್ರಕರಣದ ವಿರುದ್ಧ ನಡೆದ ಪ್ರತಿಭಟನೆಯನ್ನು ಹತ್ತಿಕ್ಕುವ ಮತ್ತು ಅದನ್ನು ಶಮನಗೊಳಿಸುವ ಗೂಂಡಾ ಪ್ರವೃತ್ತಿಯು ಈ ವ್ಯವಸ್ಥೆಯ ಸ್ಥಿತಿಯನ್ನು ಸಾರುತ್ತದೆ. ಜನ ಎಂತಹ ಅಂಧಕಾರ ಮತ್ತು ಮೂಢರಾಗಿದ್ದಾರೆ ಎನ್ನುವುದಕ್ಕೆ ಆರೋಪಿ ಮಹಾಂತನನ್ನೇ ಸಂಭಾವಿತನೆಂದು ಕೊಂಡಾಡಿದ್ದು ಅಲ್ಲದೇ ಅವನನ್ನೇ ಮಠ ಪ್ರವೇಶ ಮಾಡಿಸಿಕೊಂಡ ಪ್ರಸಂಗವೇ ಸಾಕ್ಷಿ. ಇಂತಹ ಮಠಗಳ ಹೆಸರಿನಲ್ಲಿ ದಲಿತ ಮತ್ತು ಮಹಿಳೆಯರ ಮೇಲೆ ದೌರ್ಜನ್ಯಗಳು ನಿರಂತರವಾಗಿ ನಡೆಯುತ್ತಿದ್ದರೂ ಯಾವುದೇ ಕ್ರಮಕೈಗೊಳ್ಳದ ಸರ್ಕಾರಗಳ ನೀತಿ ಖಂಡನೀಯವಾದದ್ದು ಎಂಬುದಾಗಿ ಲೇಖಕಿಯ ಆಕ್ರೋಶವಾಗಿದೆ.

“ಡಿಸೆಂಬರ್ 16ರಂದು ಮಂಗಳೂರಿನ ಕಂಪದ ಕೋಡಿಯಲ್ಲಿ ಕುರುಡು ಧಾರ್ಮಿಕ ನಂಬಿಕೆಗೆ ಬಲಿಯಾದ 3 ವರ್ಷದ ಹಸುಳೆ ಪ್ರಿಯಾಂಕ ಎಷ್ಟನೆಯ ಬಲಿಯೋ? ಒಂದು ಕಡೆ ವೈಜ್ಞಾನಿಕ ಸಾಧನೆಯಲ್ಲಿ ದೇಶ ವಿಶ್ವದ ಗಮನ ಸೆಳೆಯುತ್ತಿದ್ದರೆ, ಇನ್ನೊಂದೆಡೆ ಇಂಥ ಮೌಢ್ಯಕ್ಕೆ ಪ್ರತಿವರ್ಷ ಹಲವು ಅಮಾಯಕರು ಬಲಿಯಾಗುತ್ತಲೇ ಇದ್ದಾರೆ. 21ನೇ ಶತಮಾನದ ಮೊದಲ ದಶಕದಲ್ಲಿ ನಡೆದ ನರಬಲಿಯನ್ನು ನೆನಪಿಸಿಕೊಂಡರೆ ಸಾಕು, ಮೈ ನವಿರೇಳುತ್ತದೆ. 2002ರ ಏಪ್ರಿಲ್‌ನಲ್ಲಿ ಜಾರ್ಖಂಡ್ ರಾಜ್ಯದಲ್ಲಿ ಮಂಜು ಕುಮಾರಿ ಎನ್ನುವ ಹುಡುಗಿಯನ್ನು ಶಕ್ತಿ ದೇವತೆಗೆ ಬಲಿ ನೀಡಲಾಗಿತ್ತು. ಅದೇ ವರ್ಷ ಆಂಧ್ರ ಪ್ರದೇಶದಲ್ಲಿ ಐಶ್ವರ್ಯದ ಆಸೆಗಾಗಿ ತಾಯಿಯೇ ಮಗನನ್ನು ಬಲಿಕೊಟ್ಟಿದ್ದು ವರದಿಯಾಗಿತ್ತು. 2002ರ ಆಗಸ್ಟ್‌ನಲ್ಲಿ ಐವರು ಗುಡ್ಡಗಾಡು ಮಹಿಳೆಯರನ್ನು ಮಾಟಗಾತಿಯರೆಂದು ಕೊಲ್ಲಲಾಗಿತ್ತು. ಮೂರು ವರ್ಷದ ಹಿಂದೆ ಬೆಂಗಳೂರಿನಲ್ಲಿ ನಿಧಿ ಆಸೆಗಾಗಿ ಅರುಣ ಮತ್ತು ಎಲಿಜಬೆತ್ ಎನ್ನುವವರನ್ನು ಕೊಂದಿದ್ದು ಸುದ್ದಿಯಾಗಿತ್ತು. ಹೀಗೆ ಒಂದಿಲ್ಲ ಒಂದು ಆಸೆಗೆ ಈಗಲೂ ನರಬಲಿ ನಡೆದಿದೆ”. ದೇಶ ವೈಜ್ಞಾನಿಕವಾಗಿ ಮುಂದುವರೆಯುತ್ತಿದೆ. ಆದರೆ ಧಾರ್ಮಿಕ ನೆಲೆಯಲ್ಲಿ ಮಾತ್ರ ಅದೇ ಕುರುಡು ಸಂಪ್ರದಾಯ, ಆಚರಣೆಯಲ್ಲೇ ಮುಳುಗೇಳುತ್ತಿರುವುದು ಇನ್ನೂ ಕಡಿಮೆಯಾಗಿಲ್ಲ. ಎಷ್ಟೇ ವಿದ್ಯಾವಂತರಾಗಿದ್ದಾಗಿಯೂ ಸಹ ಇಂತಹ ಮೌಢ್ಯವನ್ನು ನಂಬಿಕೊಂಡೇ ಬರಲಾಗುತ್ತಿದೆ. ಪ್ರಜ್ಞಾವಂತರೂ ಕೂಡ ಒಂದಲ್ಲ ಒಂದು ರೀತಿಯಲ್ಲಿ ಮುಂದುವರೆಸಿಕೊಂಡು ಬರುತ್ತಿರುವುದು ಕಾಣಬಹುದಾಗಿದೆ. ನಿಧಿ ಅಥವಾ ಸಂಪತ್ತಿನ ಆಸೆಗಾಗಿ ಹೆತ್ತ ಕುಡಿಯನ್ನೂ ಲೆಕ್ಕಕ್ಕಿಲ್ಲದಂತೆ ಪ್ರಾಣ ಬಲಿಕೊಡುತ್ತಿರುವುದು ದೇಶದ ಉದ್ದಗಲಕ್ಕೂ ನಡೆಯುತ್ತಲೇ ಇದೆ. ಆದರೆ ಈ ಎಲ್ಲಾ ಆಚರಣೆಯ ಹಿಂದೆ ಜ್ಯೋತಿಷಿಗಳು, ಸ್ವಾಮಿಗಳು, ಪುರೋಹಿತಶಾಹಿ ಹುನ್ನಾರಗಳು ಇಲ್ಲದಿರಲು ಸಾಧ್ಯವಿಲ್ಲ. ಸಮಾಜವನ್ನು ಸ್ವಾಸ್ಥ್ಯದಿಂದ

ಇಡಬೇಕು ಎಂದು ಒಂದು ಕಡೆ ಬೊಬ್ಬೆಯಿಟ್ಟರೆ ಮತ್ತೊಂದೆಡೆ ಇಂತಹ ಕ್ರೂರ ಆಚರಣೆಗಳು ಎಗ್ಗಿಲ್ಲದಂತೆ ನಡೆದು ಹೋಗುತ್ತಿರುವುದು ದುರಂತವೇ ಸರಿ.

ಒಂದು ಕಾಲದಲ್ಲಿ ಶರಣ ಸಂಸ್ಕೃತಿಯನ್ನು ಒಪ್ಪಿಕೊಂಡಿದ್ದ ದಲಿತ ಕುಟುಂಬಗಳು ಇಂದು ಅನಿಷ್ಟ ಪದ್ಧತಿಯ ಅಡಿಯಾಳಾಗಿಯೇ ಉಳಿದುಕೊಂಡಿರುವುದು ದುರಂತ. "ದಲಿತಳು ಎಂಬ ಕಾರಣಕ್ಕಾಗಿಯೇ ನಿತ್ಯವೂ ಈ ಅನಿಷ್ಟ ಪದ್ಧತಿಗೆ ಬಲಿ ಮಾಡುತ್ತಿರುವ ವ್ಯವಸ್ಥೆಯ ಹಿಂದೆ ಪುರೋಹಿತಶಾಹಿ ವರ್ಗದ ಹುನ್ನಾರವಿದೆ. ಹಿಂದೆ ದೇವಸ್ಥಾನಗಳಲ್ಲಿ ದೇವರ ಸೇವೆಗೆಂದು ನೇಮಿಸಲ್ಪಡುತ್ತಿದ್ದ ದೇವದಾಸಿಯರು ಕಾಲಾನಂತರ ದೇವರಷ್ಟೇ ಅಲ್ಲ, ಅಲ್ಲಿನ ಪೂಜಾರಿ, ಊರಿನ ಮುಖಂಡ, ಗೌಡರ ಕಾಮಲಾಲಸೆಗೂ ಬಳಕೆಯಾಗತೊಡಗಿದರು. ಜಮೀನ್ದಾರಿ, ಊಳಿಗಮಾನ್ಯ ಪದ್ಧತಿಯಲ್ಲಿ ಪುರುಷ ಎಷ್ಟಾದರೂ ಮದುವೆಯಾಗಬಹುದು. ಕೆಳಜಾತಿಯ ಮಹಿಳೆಯರನ್ನೂ ತನ್ನ ಕಾಮಲಾಲಸೆಗೆ ಬಳಸಬಹುದು ಎಂಬ ನಂಬಿಕೆಯೇ ಈ ಪದ್ಧತಿ ಜೀವಂತವಾಗಿರಲು ಕಾರಣ. ಇಂದಿಗೂ ನಮ್ಮ ಹಳ್ಳಿಗಳಲ್ಲಿ ಈ ಪದ್ಧತಿ ಅವ್ಯಾಹತವಾಗಿ ನಡೆದುಕೊಂಡು ಬರುತ್ತಿದೆ ಎಂಬುದಕ್ಕೆ ಈಚೆಗೆ ಮಾಧ್ಯಮಗಳಲ್ಲಿ ವರದಿಯಾದ ಕೊಪ್ಪಳ ಜಿಲ್ಲೆಯ ಹಿರೇಸಿಂದೋಗಿ ಪ್ರಕರಣವೇ ಸಾಕ್ಷಿ. ಇಲ್ಲಿನ ಸುಪ್ರಸಿದ್ಧ ಮಠವೊಂದರ ಸೇವೆಗೆ ಮೀಸಲಾಗಿರುವ ಸುಮಾರು 80 ಕುಟುಂಬಗಳ ಎಲ್ಲಾ ಹೆಣ್ಣು ಮಕ್ಕಳು ಇಲ್ಲಿ ದೇವದಾಸಿಯರಾಗಿದ್ದಾರೆ. ಅಷ್ಟೇ ಅಲ್ಲ, ಪ್ರತೀ ಶಿವರಾತ್ರಿ, ಯುಗಾದಿ ಹಾಗೂ ಊರ ಜಾತ್ರೆಯ ಸಂದರ್ಭಗಳಲ್ಲಿ ಆ ಊರಿನ ಪೂಜಾರಿಯೇ ಮುತ್ತು ಕಟ್ಟುತ್ತಾನೆ! ಇವೆಲ್ಲವನ್ನೂ ಆ ದೇವದಾಸಿ ಮಹಿಳೆಯರು ಎಗ್ಗಿಲ್ಲದೇ ಹೇಳಿಕೊಳ್ಳುತ್ತಾರೆ. ತಮ್ಮ ಬದುಕು ಇರುವುದೇ ಹೀಗೆ. ತಮ್ಮ ಮನೆಯಲ್ಲಿ ಹುಟ್ಟುವ ಪ್ರತೀ ಹೆಣ್ಣೂ ದೇವರಿಗೆ ಮೀಸಲು ಎಂಬ ಮೂಢನಂಬಿಕೆ ಅವರಲ್ಲಿ ಆಳವಾಗಿ ಬೇರೂರಿದೆ. ಅಷ್ಟೇ ಅಲ್ಲ. 21ನೇ ಶತಮಾನದ ಈ ವೈಜ್ಞಾನಿಕ ಯುಗದಲ್ಲೂ ಈ ಪದ್ಧತಿ ತಪ್ಪಿದ್ದಲ್ಲಿ ತಮ್ಮ ಕುಟುಂಬಕ್ಕೆ ಒಳ್ಳೆಯದಾಗದು, 'ದೇವರ ಶಾಪ ತಟ್ಟುತ್ತೆ' ಎಂದು ನಂಬಿಯೇ ಆ ದಲಿತ ಮಹಿಳೆಯರು ಜೀವನ ಸಾಗಿಸುತ್ತಿರುವುದು ಸಾಮಾಜಿಕ ವ್ಯವಸ್ಥೆಯ ಕ್ರೂರ ವ್ಯಂಗ್ಯ."

ಕೆಲವು ಸಾಮಾಜಿಕ ಅನಿಷ್ಟ ಪದ್ಧತಿಗಳಲ್ಲಿ ದೇವದಾಸಿ ಪದ್ಧತಿಯೂ ಒಂದು. ದೇವರ ಸೇವೆಗೆಂದು ಮಹಿಳೆಯರಿಗೆ ಮುತ್ತು ಕಟ್ಟಿ ನೇಮಿಸಲಾಗುತ್ತಿತ್ತು, ಕಾಲ ಕ್ರಮೇಣ ಊರಿನ ಮುಖಂಡರ, ಊರಿನ ಪೂಜಾರಿಗಳ ಕಾಮಲಾಲಸೆಗೆ ತುತ್ತಾಗಬೇಕಾಯಿತು. ದೇವರ ಹೆಸರಿನಲ್ಲಿ ಕೆಳಜಾತಿಯ ಮಹಿಳೆಯರಿಗೆ ಮುತ್ತು ಕಟ್ಟುವುದು ಹಾಗೂ ಇಡೀ ಕುಟುಂಬದ ಹೆಣ್ಣು ಮಕ್ಕಳು ಈ ಅನಿಷ್ಠ ಪದ್ಧತಿಯನ್ನು ಅನುಸರಿಸಿಕೊಂಡು ಬರುವಂತೆ ಪುರೋಹಿತಶಾಹಿ ವರ್ಗವು ಹಿಂದಿನಿಂದಲೂ ಕಾಪಿಟ್ಟುಕೊಂಡೇ ಬಂದಿದೆ. ಕಾನೂನನ್ನು ಎಷ್ಟು ಕಠಿಣವಾಗಿ ಜಾರಿಗೆ ತಂದರೂ ಕೂಡ ಅದನ್ನು ಪಕ್ಕಕ್ಕೆ ಸರಿಸಿ ಈ ಪದ್ಧತಿಯನ್ನು ಆಚರಣೆ ಮಾಡುತ್ತಿರುವುದು ಎಂತಹ ನಿಕೃಷ್ಟವಾದ ಸ್ಥಿತಿ ಎಂಬುದು ಈ ಲೇಖನದಲ್ಲಿ ವಿವರಿಸುವ ಪ್ರಯತ್ನ ಮಾಡಿದ್ದಾರೆ. ದೇವರ ಬಗೆಗಿನ ಭಯವನ್ನು ಎಷ್ಟರಮಟ್ಟಿಗೆ ಗಟ್ಟಿಗೊಳಿಸಲಾಗಿದೆ ಎಂದರೆ ಆ

ಮಹಿಳೆಯರೇ ಹೇಳುವಂತೆ 'ಈ ಪದ್ಧತಿ ತಪ್ಪಿದ್ದಲ್ಲಿ ತಮ್ಮ ಕುಟುಂಬಕ್ಕೆ ಒಳ್ಳೆಯದಾಗದು, ದೇವರ ಶಾಪ ತಟ್ಟುತ್ತೆ' ಎಂಬ ನಂಬಿಕೆಯನ್ನು ಈ ದಲಿತ ಕುಟುಂಬಗಳಿಗೆ ಗಾಢವಾಗಿ ಹೇರಿಕೊಂಡು ಬರಲಾಗಿದೆ. 21ನೇ ಶತಮಾನದ ಈ ಕಾಲಘಟ್ಟದಲ್ಲಿಯೂ ದೇವದಾಸಿ ಪದ್ಧತಿಯಿಂದ ಹೊರ ಬರಲಾರದಂತೆ ಈ ಮೇಲ್ವರ್ಗವು ಅದೆಂತಹ ಬಲಿಷ್ಠ ಸರಪಳಿಯನ್ನು ಹೆಣೆದಿರಬಹುದಲ್ಲವೆ?

ಕೋಮುವಾದದ ದಳ್ಳುರಿಗೆ ಸಿಕ್ಕು ನರಳದೇ ಇರುವ ಮಹಿಳೆಯರೇ ಇಲ್ಲ. ಧರ್ಮದ ಹೆಸರಿನಲ್ಲಿ ಹೆಚ್ಚು ಬಲಿಪಶುವಾಗುವವಳು ಮಹಿಳೆಯೇ ಆಗಿರುತ್ತಾಳೆ. ಕೋಮುವಾದದಿಂದ ಅತೀ ಹೆಚ್ಚು ಸಂಕಷ್ಟಕ್ಕೆ ಮತ್ತು ಅವಮಾನಕ್ಕೆ ತುತ್ತಾಗುವವಳು ಮಹಿಳೆಯೇ. ಗುಜರಾತಿನ ಹತ್ಯಾಕಾಂಡದಲ್ಲಿ ಬಹಳಷ್ಟು ನೋವು ಮತ್ತು ಅವಮಾನವನ್ನನುಭವಿಸಿದವರು ಮುಸ್ಲಿಂ ಮಹಿಳೆಯರು, ಗರ್ಭಿಣಿಯ ಹೊಟ್ಟೆ ಸೀಳಿ ಆ ಭ್ರೂಣವನ್ನು ತ್ರಿಶೂಲದಲ್ಲಿ ಚುಚ್ಚಿ ತೆಗೆದು ಬೆಂಕಿಗೆಸೆದು ಕೊನೆಗೆ ಆ ಮಹಿಳೆಯನ್ನೂ ಉರಿಯುತ್ತಿರುವ ಬೆಂಕಿಗೆಸೆದದ್ದು ನಾವು ಎಲ್ಲೂ ಕಂಡು ಕೇಳರಿಯದ ದೌರ್ಜನ್ಯ. ಜರ್ಮನಿಯಲ್ಲಿ ನಾಜಿಗಳೂ ಕೂಡಾ ಯಹೂದ್ಯರ ಮೇಲೆ ಇಂತಹ ಪೈಶಾಚಿಕ ಕೃತ್ಯವನ್ನೆಸಗಿದ ದಾಖಲೆ ಇಲ್ಲ. ಮನುಷ್ಯರನ್ನು ಇಂತಹ ಅಮಾನವೀಯ ಹಿಂಸೆ, ಪಶುಗಳಾಗಿ ರೂಪಿಸಲು ಈ ಕೋಮುವಾದಿಗಳಿಗೆ ಹೇಗೆ ಸಾಧ್ಯವಾಯಿತು? ಈ ಕೃತ್ಯವನ್ನೆಸಗಿದವರ ಹೃದಯದಲ್ಲಿ ಮಾನವೀಯತೆಯ ಸೆಲೆ ಎಂದೆಂದಿಗೂ ಬತ್ತಿ ಹೋಗಿದೆಯೆ? ಮನುಷ್ಯರನ್ನು ಈ ರೀತಿ ರೂಪಿಸಲು ಸಾಧ್ಯವಾದುದರ ಕಾರಣವನ್ನು ನಾವೀಗ ಕಂಡುಕೊಳ್ಳಬೇಕಾಗಿದೆ.

'ಧರ್ಮ' ಎಂಬ ಅಫೀಮು ಮನುಷ್ಯನನ್ನು ಮಾನವೀಯತೆಯನ್ನೇ ಕಳೆದು ಕ್ರೂರ ವ್ಯಕ್ತಿಯಾಗಿಸುತ್ತದೆ. ಧರ್ಮ ಮತ್ತು ಪುರುಷನ ಪೈಶಾಚಿಕ ಕೃತ್ಯಕ್ಕೆ ಬಲಿಪಶುವಾಗುವುದು ಮೊದಲು ಮಹಿಳೆಯೇ ಆಗಿದ್ದಾಳೆ. ಏನೂ ಅರಿಯದ ಭ್ರೂಣವನ್ನ ತ್ರಿಶೂಲದಿಂದ ಚುಚ್ಚಿ ತೆಗೆಯುವಷ್ಟು ಮನುಷ್ಯತ್ವವನ್ನೇ ಕಳೆದುಕೊಂಡಿದ್ದಾನೆಯೇ? ಗರ್ಭಿಣಿ ಮಹಿಳೆಯು ಒಂದು ಜೀವವಾಗಿ ಕಾಣಿಸದೇ ಇರುವಷ್ಟೂ ಕೋಮು ಎಂಬ ಅಫೀಮು ಇರಲು ಸಾಧ್ಯವಾದದ್ದಾದರೂ ಹೇಗೆ? ಹಿಂದೂ ಧರ್ಮದ ಹೆಸರಿನಲ್ಲಿ ಅನ್ಯಧರ್ಮಿಯರನ್ನು ದ್ವೇಷಿಸುವ ಮತ್ತು ಹಿಂಸಿಸುವಂತಹ ಮನಸ್ಥಿತಿಯನ್ನು ಬೆಳೆಸುತ್ತಿರುವುದಾದರೂ ಹೇಗೆ? ಸಮಾನತೆ, ಸೌಹಾರ್ದತೆಯನ್ನು ಸಾರಿದ ಈ ನೆಲದಲ್ಲಿ ಇಂತಹ ಪೈಶಾಚಿಕ ಕೃತ್ಯವನ್ನೆಸಗುವಂತೆ ಕೋಮುವಾದಿಗಳು ಪ್ರೇರೇಪಿಸುತ್ತಿರುವುದು ಇನ್ನಷ್ಟು ಕ್ರೂರಿಯನ್ನಾಗಿಸುತ್ತಿದೆ ಎಂಬುದು ಸಾ.ರಾ.ಅಬೂಬಕ್ಕರ್ ಅವರು ಧರ್ಮದಿಂದಾಗಿ ನರಳುತ್ತಿರುವ ಮಹಿಳೆಯರ ಬಗೆಗೆ ಆತಂಕ ವ್ಯಕ್ತಪಡಿಸಿದ್ದಾರೆ.

ಮಹಿಳೆಯರು ಮುಟ್ಟಾದರೆ ನಮ್ಮ ಸಮಾಜವು ತುಂಬ ಕೆಟ್ಟದಾಗಿ ನಡೆಸಿಕೊಳ್ಳುವುದು. ಕರ್ನಾಟಕ ರಾಜ್ಯದ ಚಿತ್ರದುರ್ಗ, ತುಮಕೂರು, ಬಳ್ಳಾರಿ, ಬೆಂಗಳೂರು ಮತ್ತು ಹಾಸನ ಜಿಲ್ಲೆಗಳ ಕಾಡುಗೊಲ್ಲರ ಹಟ್ಟಿಗಳಲ್ಲಿ ಮುಟ್ಟಾದ

ಮಹಿಳೆಯರನ್ನು ಹಟ್ಟಿಯಿಂದಲ್ಲೇ ಹೊರ ಹಾಕುವರು. ಮಳೆಗಾಲ, ಚಳಿಗಾಲ, ಬೇಸಿಗೆ ಹೀಗೆ ಯಾವ ಕಾಲವಾದರೇನು? ಮುಟ್ಟಾದವರನ್ನು ಊರ ಹೊರಗಿನ ಕಿಲೋಮೀಟರ್‌ಗಟ್ಟಲೇ ದೂರದಲ್ಲಿ ಗಿಡಮರಗಳು ಇದ್ದರೆ ಅವುಗಳ ಆಸರೆಗೆ ಇಲ್ಲದಿದ್ದರೆ ಬಟಾಬಯಲಿನಲ್ಲಿಯೇ ನಾಲ್ಕು ದಿನಗಳು ದೂಡಬೇಕು, ಸ್ವಚ್ಛತೆಗಾಗಿ ನೀರಿನ ವ್ಯವಸ್ಥೆ ಇರುವುದಿಲ್ಲ. ಹೆಚ್ಚು ಕಡಿಮೆ ಒಂದುನೂರಾ ಆರು ಗಂಟೆಗಳನ್ನು ಮುಟ್ಟಾದವಳು ಒತ್ತಡದ ಮನಸ್ಥಿತಿಯಲ್ಲಿ ಕಳೆಯಬೇಕು, ಅದೊಂದು ಮಾನವ ಹಕ್ಕುಗಳ ಉಲ್ಲಂಘನೆಯ ಪಟ್ಟಿಗೆ ಬರುವ ಪಾಡದು. ದೇವರ, ದೈವದ ಭಯದಲ್ಲಿ ಮಹಿಳೆಯೊಬ್ಬಳು ತನ್ನನ್ನು ತಾನು ಅಂಥ ನರಕದ ಸ್ಥಿತಿಗೆ ಒಪ್ಪಿಕೊಳ್ಳುವಂತೆ ಮಾಡಲಾಗಿದೆ. ಮನುಷ್ಯನ ಜನನ ಮಹಿಳೆಯ ಮುಟ್ಟಿನ ಮೂಲಕವೇ ಆಗಿದೆ ಎಂಬುದನ್ನು ಮರೆತು ಮುಟ್ಟಿನ ಬಗೆಗೆ ಕೀಳರಿಮೆ ಬೆಳೆಸಿಕೊಂಡಿದ್ದಾರೆ. ದೇವರು, ಧರ್ಮದ ಹೆಸರಿನಲ್ಲಿ ಮಹಿಳೆಯನ್ನು ಮತ್ತಷ್ಟು ಶೋಷಣೆಗೆ ಒಳಪಡಿಸಲಾಗುತ್ತಿದೆ. ಒಂದು ವೇಳೆ ಮಹಿಳೆಯ ಮುಟ್ಟು ಇಲ್ಲವೆಂದಿದ್ದರೆ ಈ ಮಾನವ ಕುಲ ಇಲ್ಲವಾಗಿರುತ್ತಿತ್ತು ಎಂಬುದನ್ನು ಅರಿತಿದ್ದರೂ ಸಹ ಮಹಿಳೆಯನ್ನು ಈ ಸಮಾಜ ಕೆಟ್ಟದಾಗಿ ನಡೆಸಿಕೊಳ್ಳುವುದನ್ನು ಕಾಣುತ್ತೇವೆ.

“ಪ್ರತಿ ಹೆಣ್ಣಿನ ಮನದಲ್ಲೂ ಋತುಸ್ರಾವ ಮೈಲಿಗೆಯೆಂಬ ಭಾವ ಹುಟ್ಟಿ ಬೆಳೆಯುವುದರ ಹಿಂದೆ ಪುರುಷ ಪ್ರಧಾನ ಸಮಾಜ ಹೆಣ್ಣನ್ನು ಅಂಕೆಯಲ್ಲಿಡಲು ಮಾಡಿದ ಹುನ್ನಾರಗಳಾಗಿವೆ. ಮುಟ್ಟು ಮೈಲಿಗೆಯನ್ನೇ ನೆಪ ಮಾಡಿಕೊಂಡು ಎಷ್ಟೋ ಧಾರ್ಮಿಕ, ಕೌಟುಂಬಿಕ ಹಕ್ಕುಗಳನ್ನು ಆಕೆಗೆ ನಿರಾಕರಿಸಲಾಗಿದೆ. ಆದರೆ ಈ ಕಾಲದಲ್ಲೂ ಅವು ಹುನ್ನಾರಗಳೆಂದು ಆಕೆಗೆ ಅರ್ಥವಾಗುತ್ತಿಲ್ಲ. ಹೆಣ್ಣಿನ ದೇಹದ ರಚನೆ, ಅಂಗಾಂಗಗಳ ಕಾರ್ಯ ವೈಖರಿಯ ಕುರಿತು ಕಲಿತವರಲ್ಲೂ ತಿಳುವಳಿಕೆಯ ಕೊರತೆಯಿದೆ. ಋತುಚಕ್ರದ ಕುರಿತು ವೈಜ್ಞಾನಿಕ ವಿಷಯಗಳನ್ನು ತಿಳಿದುಕೊಂಡರಾದರೂ ತಪ್ಪು ಗ್ರಹಿಕೆಗಳು ದೂರವಾಗಬಹುದು. ಇದುವರೆಗೂ ಹೆಣ್ಣಿಗೆ ಮುಟ್ಟನ್ನು ಮೈಲಿಗೆ ಎಂತಲೇ ನಂಬಿಸಲಾಗಿದೆ. ಹೆಣ್ಣಿನ ಋತುಸ್ರಾವವನ್ನೇ ನೆಪವಾಗಿಸಿ ಅವಳನ್ನು ಧಾರ್ಮಿಕ ಕಾರ್ಯಗಳಲ್ಲಿ ಭಾಗಿಯಾಗಲಾರದಂತೆ ವಂಚಿಸಿಕೊಂಡೇ ಬರಲಾಗಿದೆ. ವೈಜ್ಞಾನಿಕವಾಗಿ ಚಿಂತಿಸುವುದರ ಜೊತೆಯಲ್ಲಿ ಋತುಸ್ರಾವದ ಬಗ್ಗೆ ಇರುವ ಅಪನಂಬಿಕೆಯನ್ನು ಹೋಗಲಾಡಿಸಬೇಕಾಗಿದೆ. ಅಲ್ಲದೆಯೇ ಹೆಣ್ಣು ಒಂದು ಕುಟುಂಬವನ್ನು ಬೆಳೆಸುವಂತಹ ಶಕ್ತಿಯನ್ನು ಹೊಂದಿರುವಂತಹವಳು ಎಂಬುದನ್ನು ಎಲ್ಲರು ಮನವರಿಕೆ ಮಾಡಿಕೊಳ್ಳಬೇಕಾದ ಅಗತ್ಯವಿದೆ” ಎಂಬುದು ಈ ಲೇಖಕಿಯ ವಾದವಾಗಿದೆ.

ಎಲ್ಲಾ ಧರ್ಮಗಳು ಮಹಿಳಾ ವಿರೋಧಿಯೇ ಆಗಿವೆ. ಅದರಲ್ಲಿಯೂ ಹಿಂದೂ ಧರ್ಮವು ಎಲ್ಲದಕ್ಕಿಂತ ಮೊದಲ ಸ್ಥಾನದಲ್ಲಿದೆ. ಇದಕ್ಕೆ ಉದಾಹರಣೆಯಾಗಿ ನೋಡುವುದಾದರೆ, ಶಬರಿಮಲೈ ಪ್ರಕರಣವೇ ಸಾಕ್ಷಿ. ಶಬರಿಮಲೈ ದೇವಾಲಯಕ್ಕೆ ಎಲ್ಲಾ ಜಾತಿಯ ಪುರುಷ ಭಕ್ತರು ಈ ದೇವಾಲಯಕ್ಕೆ ಹೋಗಲು ಮುಕ್ತವಾದ ಪ್ರವೇಶವಿದೆ. ಯಾವುದೇ ಒಂದು ಜಾತಿಗೆ ಸೀಮಿತವಾಗಿರದ ಏಕೈಕ

ದೇವಾಲಯವಾಗಿದೆ. ಆದರೆ ಮಹಿಳೆಯರಿಗೆ ಮಾತ್ರ ಸುತಾರಾಂ ಪ್ರವೇಶವನ್ನು ನಿರಾಕರಿಸಿದೆ. ಅದಕ್ಕೆ ಕಾರಣವನ್ನು ಶಬರಿಮಲೈನ ಅಧಿಕಾರಿಗಳು ಹೀಗೆ ಹೇಳುತ್ತಾರೆ. "ದೇವಸ್ಥಾನವನ್ನು ತಲುಪಲು ಕಾಡುದಾರಿಯಲ್ಲಿ ಎಂಟು ಕಿಲೋಮೀಟರ್ ನಡೆಯುವುದು ಮಹಿಳೆಯರಿಗೆ ಕಷ್ಟ, ಮಹಿಳೆಯರನ್ನು ನೋಡಿದರೆ ಅಯ್ಯಪ್ಪನ ಬ್ರಹ್ಮಚಾರಿತ್ಯ ಕಳಂಕಗೊಳ್ಳುತ್ತದೆ. ಶಬರಿಮಲೈಗೆ ತೀರ್ಥಯಾತ್ರೆ ಕೈಗೊಳ್ಳುವ ಮುನ್ನ ಆಚರಿಸಬೇಕಿರುವ 41 ದಿನಗಳ ವ್ರತವನ್ನು ಪಾಲಿಸುವುದು ಹೆಂಗಸರಿಗೆ ಕಷ್ಟ, ಮಹಿಳೆಯರು ಜೊತೆಗೆ ಬಂದರೆ ಪುರುಷರಲ್ಲಿ 'ಕೆಟ್ಟ ಆಲೋಚನೆಗಳು' ಮೂಡುತ್ತವೆ! ಮಹಿಳೆಯರಿಗೆ ಪ್ರವೇಶ ನೀಡಿದರೆ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವುದು ಕಷ್ಟವಾಗುತ್ತದೆ. ಮುಟ್ಟಾಗಿರುವ ಮಹಿಳೆಯರು ಕಾಡಿನ ಪ್ರಾಣಿಗಳನ್ನು ಆಕರ್ಷಿಸಿ ಇತರೆ ಯಾತ್ರಾರ್ಥಿಗಳಿಗೆ ಅಪಾಯ ತರುತ್ತಾರೆ. ದೇವರಿಗೆ ಮಹಿಳೆಯನ್ನು ಕಂಡರೆ ಆಗುವುದಿಲ್ಲ." ಎಂತಹ ಕ್ಷುಲ್ಲಕ ಕಾರಣವನ್ನು ಈ ಅಧಿಕಾರಿಗಳು ನೀಡುತ್ತಾರೆ. ಪುರುಷನ ಬಲಹೀನತೆಯನ್ನು ಮುಚ್ಚಿಕೊಳ್ಳಲು ಮಹಿಳೆಯ ಮೇಲೆ ತಪ್ಪನ್ನು ಹೊರಿಸುತ್ತಿದ್ದಾನೆ. ತನ್ನ ಉಳಿಯುವಿಕೆಗಾಗಿ ಹೆಣ್ಣು ಮತ್ತು ಅವಳ ಮುಟ್ಟಿನ ಬಗ್ಗೆ ಅಪಪ್ರಚಾರವನ್ನು ಮಾಡಲಾಗಿದೆ. ಮುಟ್ಟಾದ ಮಹಿಳೆ ಕಾಡುಪ್ರಾಣಿಗಳನ್ನು ಆಕರ್ಷಿಸಲು ಹೇಗೆ ಸಾಧ್ಯ? ಅಲ್ಲದೆ 41 ದಿನಗಳ ವ್ರತವನ್ನು ಆಚರಿಸಲು ಅವಳಿಂದ ಸಾಧ್ಯವಿಲ್ಲ ಎನ್ನುವುದನ್ನು ಈ ಪುರುಷನೇ ಹೇಗೆ ನಿರ್ಧಾರ ಮಾಡಿಯಾನು? ತನ್ನಲ್ಲಿನ ದೌರ್ಬಲ್ಯವನ್ನು ಮುಚ್ಚಿಕೊಳ್ಳಲು ಮುಟ್ಟು ಮೈಲಿಗೆ ಎಂಬ ನೆಪ ಹೇಳುವುದಲ್ಲದೆ "ದೇವರ ಬ್ರಹ್ಮಚಾರಿತ್ರ್ಯ ಅಪವಿತ್ರಗೊಳ್ಳುತ್ತದೆ' ಎಂದು ಹೇಳುವುದರ ಹುನ್ನಾರಗಳನ್ನು ಅರ್ಥೈಸಿಕೊಳ್ಳಬೇಕಾಗಿದೆ. ದೇವರು ಎಲ್ಲರಿಗೂ ಸಮಾನವಲ್ಲವೆ? ದೇವರ ಸೃಷ್ಟಿಯಲ್ಲಿ ಹೆಣ್ಣು ಬೇರೆ ಗಂಡು ಬೇರೆಯಾಗಲು ಸಾಧ್ಯವಿದೆಯೇ? ಹೀಗೆ ಹಲವಾರು ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ಪುರುಷಪ್ರಧಾನ ಸಮಾಜದಲ್ಲಿ ಹೆಣ್ಣಿನ ಸಮಾನ ಸ್ಥಾನಮಾನದ ಬಗ್ಗೆ ಎಂದಿಗೂ ನಿರಾಕರಣೆಯಿದೆ. ಹಿಂದೂ ಧರ್ಮದೊಳಗೆ ಹೆಣ್ಣನ್ನು ನಡೆಸಿಕೊಳ್ಳುವ ರೀತಿ ಮತ್ತು ಅವಳನ್ನು ಹಿಂಸಿಸುವ ಬಗೆಯನ್ನು ಗೌರಿ ಲಂಕೇಶ್ ಅವರು ದಿಟ್ಟವಾಗಿ ಖಂಡಿಸಿದ್ದಾರೆ. ಇದು ಹಿಂದೂ ಧರ್ಮದ ಕಥೆಯಾದರೆ, ಮುಸ್ಲಿಂ ಧರ್ಮದ ಮಹಿಳೆಯರ ಕಥೆ ಮತ್ತೊಂದು ರೀತಿಯಾದದ್ದಾಗಿದೆ.

'ಇಮ್ರಾನಳ' ವಿಷಯದಲ್ಲಂತೂ ಧರ್ಮ ಗುರುಗಳು ಖುರಾನಿನ ನಿಯಮಗಳನ್ನೇ ಅವಮಾನಿಸಿದ್ದಾರೆ. ಖುರಾನಿನ ನಿಯಮದ ಪ್ರಕಾರ ಮಾವ ಮತ್ತು ಸೊಸೆಯ ಸಂಬಂಧವೆಂಬುದು ತಂದೆ ಮಗಳ ಸಂಬಂಧ. ಒಂದು ವೇಳೆ ಮಗನು ಸೊಸೆಗೆ ತಲಾಖ್ ನೀಡಿದರೂ ಅಥವಾ ಸತ್ತರೂ ಮಾವ ಮತ್ತು ಸೊಸೆಯ ಸಂಬಂಧ ಮುರಿಯುವುದಿಲ್ಲ. ಹಾಗೆಯೇ ಅತ್ತೆ ಮತ್ತು ಅಳಿಯನ ಸಂಬಂಧ ಕೂಡಾ. ಅಳಿಯ ಮಗಳಿಗೆ ತಲಾಖ್ ನೀಡಿದರೂ ಅಲ್ಲಿ ತಾಯಿ ಮತ್ತು ಮಗನಂತಿರುವ ಸಂಬಂಧ ಹಾಗೆಯೇ ಉಳಿಯುತ್ತದೆ. ನಿಯಮ ಈ ರೀತಿ ಇರುವಾಗ ಮಾವ ಸೊಸೆಯನ್ನು ನಿಖಾ ಮಾಡಿಕೊಳ್ಳಲಿ ಎಂದು ಧರ್ಮಗುರುಗಳು ತೀರ್ಪು ನೀಡಿರುವುದಾದರೂ ಹೇಗೆ? ಇವರು ಅನುಸರಿಸುತ್ತಿರುವ ಈ ನಿಯಮ ಯಾವುದು? ಅತ್ಯಾಚಾರ

ಮಾಡಿದವರನ್ನು ಕಲ್ಲಿನಿಂದ ಹೊಡೆದು ಕೊಲ್ಲಬೇಕೆಂಬ ಶಿಕ್ಷಾಕ್ರಮ ಎಲ್ಲಿ ಹೋಯಿತು? ಅಥವಾ ಪುರುಷ ಪ್ರಧಾನ ಸಮಾಜ ಈವರೆಗೆ ಗಂಡಸರು ಕೈಗೊಳ್ಳುವ ಅಪರಾಧಗಳಿಗೆ ಹೆಂಗಸರಿಗೆ ಶಿಕ್ಷೆ ನೀಡಿದಂತೆ ಅತ್ಯಾಚಾರಿಗೆ ಆ ಹೆಣ್ಣನ್ನು ಮದುವೆ ಮಾಡಿಕೊಡುವ ಪರಿಪಾಠವನ್ನಾರಂಭಿಸಿ ಇದೂ ಕೂಡಾ ಧಾರ್ಮಿಕ ನಿಯಮವೆಂದು ಸಮಾಜವನ್ನು ನಂಬಿಸಲು ಹೊರಟಿದೆಯೇ? ತನ್ನ ಐದು ಮಕ್ಕಳ ತಂದೆಯನ್ನು ಇನ್ನು ಮುಂದೆ ಮಗನೆಂದು ತಿಳಿದುಕೊಳ್ಳಬೇಕೆನ್ನುವ ಈ ಧಾರ್ಮಿಕ ಗುರುಗಳು ಮಾನಸಿಕ ಆಸ್ಪತ್ರೆಯಿಂದ ತಪ್ಪಿಸಿಕೊಂಡು ಬಂದವರಾಗಿರಬಹುದೆಂಬ ಸಂದೇಹ ನನ್ನನ್ನು ಕಾಡುತ್ತಿದೆ. ಒಳ್ಳೆಯ ಸಂದೇಶವನ್ನು ನೀಡಬೇಕಾಗಿರುವ ಧರ್ಮಗುರುಗಳು ಹೊಸ ಪದ್ಧತಿಯನ್ನು ಜಾರಿಮಾಡುವ ಮೂಲಕ ಮುಸ್ಲಿಂ ಮಹಿಳೆಯನ್ನು ಇನ್ನಷ್ಟು ಕ್ರೂರ ಪರಿಸ್ಥಿತಿಗೆ ತಳ್ಳುವಂತಹ ಕೆಲಸವನ್ನು ಮಾಡಲಾಗುತ್ತಿದೆ. ಅಲ್ಲದೆಯೆ ಧರ್ಮಗ್ರಂಥದಲ್ಲಿರುವ ನಿಯಮಗಳನ್ನು ಪುರುಷನು ತನಗೆ ಬೇಕಾದ ಹಾಗೆ ತಿರುಚಿಕೊಂಡು ಮಹಿಳೆಯನ್ನು ಇನ್ನಷ್ಟು ಶೋಷಣೆ ಮಾಡುತ್ತಿರುವ ಧಾರ್ಮಿಕ ಕ್ರೌರ್ಯವನ್ನು ಸಾ.ರಾ.ಅಬೂಬಕ್ಕರ್ ಅವರು ವಿವರಿಸಿದ್ದಾರೆ.

ಜಾತಿ ಧರ್ಮಗಳ ಆಧಾರದಲ್ಲಾಗಲಿ ಪಕ್ಷಪಾತ ಮಾಡುವುದನ್ನು ಸಂವಿಧಾನ ನಿಷೇಧಿಸಿದೆ. ಭಾರತ ಸಂವಿಧಾನ ಪ್ರತಿಯೊಬ್ಬರ ಧಾರ್ಮಿಕ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುತ್ತದೆ. ಧಾರ್ಮಿಕ ಸ್ವಾತಂತ್ರ್ಯದ ಈ ಅವಕಾಶದಿಂದಾಗಿ ಮಹಿಳೆಯರಿಗೆ ಸಂವಿಧಾನ ನೀಡಿದ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಸಮಾಜವು ಧರ್ಮದ ಹೆಸರಿನಲ್ಲಿ ಕಿತ್ತುಕೊಳ್ಳುತ್ತದೆ. ಸಂವಿಧಾನದಲ್ಲಿ ಸಮಾನತೆ ಇದ್ದರೂ, ವ್ಯಕ್ತಿ ನಿಯಮಗಳನ್ನು ಧಾರ್ಮಿಕ ನಿಯಮಗಳಿಗನುಸಾರವಾಗಿ ರಚಿಸುವುದರಿಂದ ಮಹಿಳೆಯರು ತಮ್ಮ ಸಾಂವಿಧಾನಿಕ ಹಕ್ಕುಗಳಿಂದ ವಂಚಿತರಾಗುತ್ತಾರೆ. ನ್ಯಾಯಾಧೀಶರೊಬ್ಬರು ಹಿಂದೂ ವಿಚ್ಛೇದಿತ ಮಹಿಳೆಗೆ ಜೀವನಾಂಶ ನೀಡಬೇಕೆಂದು ತೀರ್ಪು ನೀಡಿದರೆ ಮುಸ್ಲಿಂ ಮಹಿಳೆಗೆ ಮೂರು ತಿಂಗಳ ಅವಧಿಗೆ ಮಾತ್ರ ಜೀವನಾಂಶ ನೀಡಬೇಕೆಂದು ತೀರ್ಪು ನೀಡಲಾಗುತ್ತದೆ. ಭಾರತ ಸಂವಿಧಾನ ಮತ್ತು ಪ್ರಜಾಸತ್ತೆಗೆ ಜಾಗತಿಕ ಮನ್ನಣೆ ಇದ್ದರೂ ಇಂತಹ ವೈರುಧ್ಯಗಳಿಂದಾಗಿ ಈ ಮನ್ನಣೆ ಅನುಭವಿಸಬೇಕಾಗಿದೆ. ಸ್ತ್ರೀ–ಪುರುಷರಲ್ಲಿ ಮಾತ್ರವಲ್ಲ, ಈ ದೇಶದ ಸ್ತ್ರೀಯರಿಗೆ ಸಮಾನತೆಯಿಲ್ಲವೆಂಬುದು ಇದರಿಂದ ವ್ಯಕ್ತವಾಗುತ್ತದೆ. ಮಹಿಳೆಯರೆಲ್ಲರೂ ಜಾತಿ, ಧರ್ಮಗಳ ಬಲೆಯಿಂದ ಹೊರಬಂದು ಒಟ್ಟಾದಾಗ, ಸಹೋದರಿ ಭಾವದಿಂದ ಪರಸ್ಪರ ಕೈ ಹಿಡಿದು ಮುನ್ನಡೆದು ಎಲ್ಲಾ ಅಸಮಾನತೆಗಳ ವಿರುದ್ಧ ಧ್ವನಿ ಎತ್ತಿದಾಗ ಈ ಪರಿಸ್ಥಿತಿ ಬದಲಾದರೂ ಆಗಬಹುದು.” ಭಾರತವನ್ನು ಸಂವಿಧಾನದಲ್ಲಿರುವ ಸ್ವಾತಂತ್ರ್ಯತೆಯನ್ನು ಹೇಳುತ್ತಲೆ ನ್ಯಾಯಾಲಯದ ತೀರ್ಪನ್ನು ಅಥವಾ ಮಹಿಳೆಯರಿಗೆ ಇರುವ ಅಸಮತೋಲನವಾದ ನ್ಯಾಯ ವ್ಯವಸ್ಥೆಯನ್ನು ಪ್ರಶ್ನಿಸುತ್ತಾರೆ. ಭಿನ್ನ ಧರ್ಮಿಯ ಮಹಿಳೆಯರಿಗೆ ಇರುವ ಅಸಮಾನತೆಯನ್ನು ಜೊತೆಗೆ ಮಹಿಳೆಯರ ನಡುವೆಯೇ ಇರುವ ಲಿಂಗ ಸಮಾನತೆಯನ್ನು ಇಲ್ಲಿ ವಿಷಾದಿಸುತ್ತಾರೆ.

ವಿವಿಧ ಧರ್ಮಗಳ ಮಹಿಳೆಯರೆಲ್ಲರನ್ನು ಬೇರ್ಪಡಿಸಿರುವ ಈ ಪಿತೃಪ್ರಧಾನ

ಸಮಾಜದ ವಿರುದ್ಧ ಎಲ್ಲರೂ ಸಮಾನ ಮನಸಿನಿಂದ ಪ್ರತಿಭಟಿಸಬೇಕೆಂದು ಇಲ್ಲಿ ಹೇಳುತ್ತಿರುವುದನ್ನು ಕಾಣುತ್ತೇವೆ. ಪಿತೃಪ್ರಧಾನ ಸಮಾಜದಲ್ಲಿ ಪುರುಷನು ಮಹಿಳೆಯನ್ನು ಅವಲಂಬಿತಳಾಗಿಯೇ ಮುಂದುವರೆಸಿಕೊಂಡು ಹೋಗುವ ಮತ್ತು ತನ್ನ ಅಧೀನದಲ್ಲಿಯೆ ಇರಬೇಕೆಂದು ಬಯಸುತ್ತಾನೆ. ಮಾತೃಪ್ರಧಾನ ವ್ಯವಸ್ಥೆಯಿಂದ ಪಿತೃಪ್ರಧಾನ ವ್ಯವಸ್ಥೆಯಾಗಿ ವರ್ಗಾವಣೆಯಾದಾಗಿನಿಂದ ಮಹಿಳೆ ಕೇವಲ ಹೆರುವ ಯಂತ್ರವಾಗಿ ಹಾಗೂ ಅವನ ಗುಲಾಮಳನ್ನಾಗಿಯೆ ನಡೆಸಿಕೊಂಡು ಬರಲಾಗಿದೆಯೇ ವಿನಃ ಆಕೆ ತನ್ನಂತೆಯೇ ಮನುಷ್ಯಳು. ಅವಳಿಗೂ ಅವಳದೆ ವ್ಯಕ್ತಿತ್ವ ಇದೆ ಎಂಬುದನ್ನು ಎಂದಿಗೂ ಒಪ್ಪಿಕೊಳ್ಳಲಾರದು ಈ ಪಿತೃಪ್ರಧಾನ ವ್ಯವಸ್ಥೆ.

ಮಹಿಳೆಯ ಬದುಕಿನ ಮುಖ್ಯ ಕೇಂದ್ರ ಪುರುಷನೇ ಆಗಿರತಕ್ಕದ್ದು, ಇದಕ್ಕಾಗಿ ವಿವಾಹ, ಗಂಡ, ಮಕ್ಕಳು, ಮನೆ, ಮನೆತನ ಇತ್ಯಾದಿಗಳನ್ನು ಕಟ್ಟುನಿಟ್ಟಿನಲ್ಲಿ ಅನುಸರಿಸಬೇಕು. ಇವುಗಳಿಗಾಗಿ ಜೀವ ತೇಯುತ್ತಲೇ ಅವಳು ಉಸಿರಾಡಬೇಕು. ಇದರ ಇನ್ನೊಂದು ತಾರ್ಕಿಕ ಸಿದ್ಧಾಂತವೆಂದರೆ ಅವಳು ತನಗಾಗಿ ಎಂದೂ ಒಂದು ಕ್ಷಣವೂ ಬದುಕು ಸಾಗಿಸಬಾರದು, ಹಾಗೆ ಚಿಂತಿಸಬಾರದು. ಆಗ ಮಾತ್ರವೇ ಅವಳಿಗೆ ಸ್ವರ್ಗದಲ್ಲಿ ಪ್ರವೇಶ ದೊರಕೀತು. ಇಲ್ಲಿ ಸ್ವರ್ಗ ಮತ್ತು ನರಕ ಪ್ರಾಪ್ತಿಯನ್ನು ಈ ಪಿತೃಪ್ರಧಾನ ವ್ಯವಸ್ಥೆ ಹೇಗೆ ನಿರ್ಧರಿಸುತ್ತದೆ ಮತ್ತು ಅದರೊಂದಿಗೆ ಮಹಿಳೆಯನ್ನು ಮತ್ತಷ್ಟು ಶೋಷಣೆಗೆ ಎಡೆಮಾಡಿ ಕೊಡುವ ವ್ಯವಸ್ಥೆಯನ್ನಿಲ್ಲಿ ವ್ಯಕ್ತಪಡಿಸಿದ್ದಾರೆ.

ದೇಶದಲ್ಲಿನ ಜನಸಂಖ್ಯೆಯಲ್ಲಿ ಅರ್ಧದಷ್ಟಿರುವ ಮಹಿಳೆಯ ಆರ್ಥಿಕ ಬೆಳವಣಿಗೆಯಲ್ಲಿ ಅರ್ಥಪೂರ್ಣವಾಗಿ ಬಳಕೆಯಾಗುತ್ತಿಲ್ಲ. ಕುಟುಂಬವು ಮಹಿಳೆಯ ಉದ್ಯೋಗದ ಬಗ್ಗೆ ಬಹಳ ಚೌಕಾಸಿ ನಡೆಸುತ್ತದೆ. ಆದರೆ ಪುರುಷನೋರ್ವ ತನ್ನ ಉದ್ಯೋಗವನ್ನು ಆರಿಸಿಕೊಳ್ಳುವ ಬಗೆಗೆ ಯಾವ ತರಹದ ಚಕಾರವನ್ನು ಎತ್ತುವುದಿಲ್ಲ. ಕಾರ್ಲ್ ಮಾರ್ಕ್ಸ್ ತಮ್ಮ ಬಂಡವಾಳ ಶಾಹಿತ್ವದಲ್ಲಿ ಮಹಿಳೆಯ ಶೋಷಣೆಯನ್ನು ಈ ರೀತಿಯಾಗಿ ವಿವರಿಸಿದ್ದಾರೆ. "ಬಂಡವಾಳಶಾಹಿ ಮತ್ತು ಮಹಿಳೆ ಇದ್ದಾರೆ. ಮಹಿಳೆ ಕುಟುಂಬದ ಹೊರಗೆ ಆರ್ಥಿಕತೆಯಲ್ಲಿ ಮಹಿಳೆ ಕಾರ್ಮಿಕಳಾಗಿ, ಕೂಲಿ ಗುಲಾಮಳಾಗಿ ಶೋಷಿಸಲ್ಪಟ್ಟರೆ ಕುಟುಂಬದೊಳಗೆ ಕೂಲಿಯೇತರ ಗುಲಾಮಳಾಗಿ ಶೋಷಿಸಲ್ಪಡುತ್ತಿದ್ದಾಳೆ. ಇದು ಮಹಿಳೆ ಮೇಲೆ ದ್ವಿಮುಖ ದಮನವೇ ಆಗಿದೆ." ಮಹಿಳೆ ಆದವಳು ಏಕಕಾಲದಲ್ಲಿ ಎರಡೆರಡು ಜವಾಬ್ದಾರಿಯನ್ನು ನಿಭಾಯಿಸಿದ್ದರೂ ಸಹ ಶೋಷಣೆಯಿಂದೇನು ಮುಕ್ತಳಾಗಿಲ್ಲ. ಮಹಿಳೆ ದುಡಿದರೂ ಕೂಡ ಅವಳ ದುಡಿಮೆಗೆ ಯಾವುದೇ ರೀತಿಯ ಪ್ರತಿಫಲ ದೊರೆಯುವುದಿಲ್ಲ. ಮನೆಯಲ್ಲಿಯೇ ಆಕೆ ಒಂದು ನಿಮಿಷ ಬಿಡುವಿಲ್ಲದೆ ದುಡಿದರೂ ಅವಳ ಶ್ರಮಕ್ಕೆ ಯಾವುದೇ ರೀತಿಯಾದಂತಹ ವೇತನ ದೊರೆಯುವುದಿಲ್ಲ. ಅವಳ ದುಡಿಮೆ ಲೆಕ್ಕಕ್ಕೇ ಬರುವುದಿಲ್ಲ. ಇದಕ್ಕೆಲ್ಲ ಕಾರಣ ಕುಟುಂಬದೊಳಗಿನ ವಿವಾಹ ಸಂಸ್ಥೆಯೇ ಆಗಿದೆ.

ಕುಟುಂಬದಲ್ಲಿಯೇ ಲಿಂಗ ತಾರತಮ್ಯವನ್ನು ಎಸಗುತ್ತಲೇ ಮಹಿಳೆಯನ್ನು ಎರಡನೇ ದರ್ಜೆಯವಳಾಗಿ ನೋಡಲಾಗಿದೆ, ಅವಳ ಶಿಕ್ಷಣ-ಬೌದ್ಧಿಕತೆಯನ್ನು

ಮೊಟಕುಗೊಳಿಸಲಾಗಿದೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಅಧೀನವಾಗಿಯೇ ನಡೆಸಿಕೊಳ್ಳುವಂತಹದ್ದು ಮತ್ತು ಗಂಡಿನ ಭೋಗದ ವಸ್ತುವನ್ನಾಗಿ ಕಾಣುವಂತಹದ್ದು ಇಂದಿಗೂ ಮುಂದುವರೆದುಕೊಂಡು ಬಂದಿರುವುದನ್ನು ನಾವು ಕಾಣುತ್ತೇವೆ. ಮಹಿಳೆಯರಲ್ಲಿ ಆಯ್ಕೆ ಪ್ರಶ್ನೆ ಬಂದಾಗಲೂ ಸಹಿತ ಅವಳ ಆಸೆ ಆಕಾಂಕ್ಷೆಗಳಿಗೆ ಬೆಲೆಕೊಡದೆ ಅವಳು ಯಾವ ಕೆಲಸ ಮಾಡಬೇಕು, ಯಾವುದನ್ನು ಆಯ್ಕೆ ಮಾಡಿಕೊಂಡರೆ ಅವಳಿಗೆ ಒಪ್ಪುತ್ತದೆ ಅಂತಲೂ ಅಥವಾ ಆಕೆಗೆ ಕೆಲಸ ನಿಭಾಯಿಸಲು ಸಮರ್ಥಳಿಲ್ಲ ಎಂಬುದನ್ನು ಈ ಪುರುಷ ಪ್ರಧಾನ ವ್ಯವಸ್ಥೆಯೇ ನಿರ್ಧರಿಸುತ್ತದೆ. ಸಂವಿಧಾನದಲ್ಲಿ ಸಮಾನತೆಯನ್ನು ಹೇಳುತ್ತಲೆ ಇರುವಾಗ, ಮಹಿಳೆಯರ ಸಮಸ್ಯೆಗಳು ನ್ಯಾಯಾಲಯದ ಮೆಟ್ಟಿಲೇರಿದಾಗ ಏಕೆ ಆಯಾ ಆಯಾ ಧರ್ಮದ ಕಟ್ಟಳೆಗೆ ಒಪ್ಪಿಸಿ ಹಿಂದಕ್ಕೆ ಸರಿಯುವಂತಹ ಕೆಲಸ ಮಾಡುತ್ತದೆ. ಈ ನ್ಯಾಯಾಂಗವು ಅಡ್ಡಗೋಡೆಯ ಮೇಲೆ ದೀವಿಗೆಯನ್ನಿರಿಸಿ ತಟಸ್ಥರಾಗುತ್ತದೆ. ಇದೇ ಭಾರತದ ಏಕರೂಪತೆಯನ್ನು ಮತ್ತು ಸಮಾನತೆಯನ್ನು ಒಳಗೊಂಡಿರುವ ಸಂವಿಧಾನವೆಂದಾದರೆ, ಮಹಿಳೆಯರ ಸಮಸ್ಯೆಗಳಿಗೆ ನ್ಯಾಯ ಒಂದೇ ಆಗಬೇಕಲ್ಲವೇ? ನ್ಯಾಯಾಂಗವು ಮಹಿಳೆಯರ ಮೇಲೆ ಯಾಕೀ ತರತಮ ನೀತಿಯನ್ನು ಅನುಸರಿಸುತ್ತದೆ? ಪ್ರಸ್ತುತ ಸಮಾಜದಲ್ಲಿ ಮಹಿಳೆಗೆ ಶಿಕ್ಷಣವಿದ್ದಾಗಲೂ ಸಹ ಅವಳಿಗೆ ಸಿಗಬೇಕಾದ ಮೂಲಭೂತ ಹಕ್ಕನ್ನು ಕಿತ್ತುಕೊಳ್ಳಲಾಗುತ್ತಿದೆ. ಧರ್ಮದ ನೆಲೆಯೊಳಗೆ ಇನ್ನಿಲ್ಲದಂತೆ ಶೋಷಣೆ ಮಾಡಲಾಗುತ್ತಿದೆ. ಅದರಿಂದ ಮಹಿಳೆಯು ಅನುಭವಿಸುತ್ತಿರುವ ತಲ್ಲಣಗಳೇನು? ಇದರಿಂದಾಗಿ ಬಡಕುಟುಂಬಗಳು ಹೇಗೆ ನಲುಗುತ್ತಿವೆ? ಕುಟುಂಬದೊಳಗಿನ ಹೆಣ್ಣು ಮಗುವು ಏನೆಲ್ಲಾ ಸಂಕಷ್ಟಕ್ಕೆ ಸಿಲುಕಿದೆ ಎನ್ನುವ ಪ್ರಶ್ನೆಯನ್ನು ಇಂದು ಕೇಳಬೇಕಾಗಿದೆ. ಈ ಎಲ್ಲಾ ಪ್ರಶ್ನೆಗಳನ್ನು ಮಹಿಳಾ ವಿಚಾರ ಸಾಹಿತ್ಯವು ಚರ್ಚಿಸುತ್ತಾ ಪರಿಹಾರ ಹುಡುಕಲು ಪ್ರಯತ್ನಿಸುತ್ತಿದೆ.

**ಪರಾಮರ್ಶನ ಗ್ರಂಥಗಳು:**


1. ಸುಮಿತ್ರಾಬಾಯಿ ಬಿ.ಎನ್., (2018), ಸ್ತ್ರೀವಾದ: ಒಂದು ಅವಲೋಕನ, ಶಿವಮೊಗ್ಗ: ಅಹರ್ನಿಶಿ ಪ್ರಕಾಶನ.
2. ಪಾರ್ವತಿ ಎಚ್.ಎಸ್., (1992), ಸಾಹಿತ್ಯ-ಮಹಿಳಾದೃಷ್ಟಿ, ಬೆಂಗಳೂರು: ಮಾನಸೋಲ್ಲಾಸ ಪ್ರಕಾಶನ.
3. ವಿಜಯಾ ದಬ್ಬೆ, (1997), ನಾರಿ: ದಾರಿ-ದಿಗಂತ, ಮೈಸೂರು: ರಚನಾ ಪ್ರಕಾಶನ.
4. ಶ್ರೀಮತಿ ಎಚ್.ಎಸ್., (2022), ಅಧಿಕಾರ ಮತ್ತು ಅಧೀನತೆ, ಹೆಗ್ಗೋಡು (ಸಾಗರ): ಆಕಾರ ಪ್ರಕಾಶನ.
5. ಆಶಾದೇವಿ ಎಂ.ಎಸ್., (2016), ಬೆಳಕಿಗಿಂತ ಬೆಳ್ಳಗೆ (ವಚನಕಾರ್ತಿಯರು ಹಾಗೂ ಮಧ್ಯಯುಗೀನ ಮಹಿಳಾ ಅನುಭಾವಿಗಳು), ಬೆಂಗಳೂರು: ಕೇಂದ್ರ ಸಾಹಿತ್ಯ ಅಕಾಡೆಮಿ.
6. ನಾಗಭೂಷಣ ಸ್ವಾಮಿ ಓ.ಎಲ್., (2014), ವಿಮರ್ಶೆಯ ಪರಿಭಾಷೆ, ಬೆಂಗಳೂರು: ಅಂಕಿತ ಪುಸ್ತಕ.
7. ಅಮೂರ ಜಿ.ಎಸ್., (1982), ಆಧುನಿಕ ಕನ್ನಡ ವಿಮರ್ಶೆ (ಪ್ರಕಾರ, ಪ್ರೇರಣೆ ಮತ್ತು ಪ್ರಯೋಗ), ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ.